**ದಿನಾಂಕ 11/11/2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ** ಶ್ರೀ ಎ.ಎಸ್. **ವಕೀಲರಿಂದ**

ವಾದಿ ನನ್ನ ದೊಡ್ಡಮ್ಮ. ಸದರಿಯವರು ನನ್ನ ದೊಡ್ಡಮ್ಮ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರು ಏನೇನು ವ್ಯವಹಾರ ಮಾಡಿದ್ದಾರೆ ಎಂಬ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಈ ದಾವೆಯ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ. ವಾದಿಗೆ 3 ಜನ ಗಂಡುಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. ವಾದಿಯರ ಮಕ್ಕಳು ವಾದಿಯ ಜೊತೆ ವಿಶ್ವಾಸದಿಂದ ಇದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿಯವರ ಮಕ್ಕಳಲ್ಲಿ ಒಬ್ಬರು ಹೊಳೆನರಸೀಪುರದಲ್ಲಿ ಇರುತ್ತಾರೆ.

ವಾದಿಯ ಆರೋಗ್ಯಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿ ನನ್ನ ದೊಡ್ಡಮ್ಮ ಅಲ್ಲ ಎಂದರೆ ಸುಳ್ಳು. ವಾದಿ ಹಾಗೂ ಅವರು ಮಕ್ಕಳು ನ್ಯಾಯಾಲಯಕ್ಕೆ ಬಂದರೆ ನಿಜ ವಿಚಾರ ಗೊತ್ತಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ದಾವೆ ಹಾಕಲು ಮಾಹಿತಿ ನೀಡುವಾಗ ನಾನು ಹಾಜರಿರಲಿಲ್ಲ ಎಂದರೆ ಸಾಕ್ಷಿ ಇದ್ದೆ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಅವರ ಜೊತೆಗೆ ಹೋಗಿದ್ದೆ ಎಂದರೆ ಸಾಕ್ಷಿ ಸುಮ್ಮನೆ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ವಾದಿಯ ಮಕ್ಕಳು ಬಂದಿರಲಿಲ್ಲ. ದಾವಾ ಆಸ್ತಿ ಸರ್ವೆ ನಂ. 149. ಸದರಿ ಆಸ್ತಿ ಪೋಡು ಆಗಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಎಷ್ಟು ವಿಸ್ತೀರ್ಣ ಎಂದರೆ ಸಾಕ್ಷಿ 14 ಗುಂಟೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ದಕ್ಷಿಣಕ್ಕೆ ರಸ್ತೆ, ಪಶ್ಚಿಮಕ್ಕೆ ಗವಿಬೋರೆನವರ ಜಮೀನು, ಉತ್ತರಕ್ಕೆ ಕುಸುಮ ರವರ ಜಮೀನು ಹಾಗೂ ಪೂರ್ವಕ್ಕೆ ಗೋವರ್ಧನ್ ರವರ ಜಮೀನು. ಸರ್ವೆ ನಂ. 149 ರಲ್ಲಿ ವಾದಿ ಹೊರುತುಪಡಿಸಿ ಬೇರೆ ಯಾರು ಜಮೀನು ಖರೀದಿ ಮಾಡಿಲ್ಲ. ಸದರಿ ಪ್ರಶ್ನೆ ಪುನಃ ಕೇಳಲಾಗಿ ಸಾಕ್ಷಿ ಪ್ರತಿವಾದಿ ಹಾಗೂ ಮತ್ತೊಬ್ಬರು ಅವರು ಹೆಸರು ನನಗೆ ಗೊತ್ತಿಲ್ಲ.

ನನಗೆ ಕನ್ನಡ ಓದಲು ಬರುತ್ತದೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಪ್ರತಿವಾದಿ ವಾದಿ ಯಾರ ಬಳಿ ಜಮೀನು ಖರೀದಿ ಮಾಡಿದ್ದಾರೆ ಅವರ ಬಳಿ ಇವರು ಸಹ ಖರೀದಿ ಮಾಡಿದ್ದಾರೆ ಎಂದು ಕೇಳಲಾಗಿ ಸಾಕ್ಷಿ ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪತ್ರ ಓದಿ ಹೇಳಿ ಗೋವರ್ಧನ್ ರವರು ಆನಂದ್ ಗೆ ಬರೆದುಕೊಟ್ಟ ಕ್ರಯಪತ್ರ ಎಂದು ಕೇಳಿದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ ದಾಖಲಾತಿ ಪರಿಶೀಲನೆ ಮಾಡಿರುತ್ತೇನೆ. ನಿ.ಪಿ 4 ನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿ.ಪಿ 4 ನ್ನು ಓದಿ ಹೇಳಿದರೆ ಗೊತ್ತಾಗುತ್ತದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಗಿರುತ್ತದೆ.

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**